ಹೇಳುತ್ತಿರುವಂತೆ ಮೇಲುನೋಟಕ್ಕೆ ಕೇಳುತ್ತಿದ್ದರೂ ಅದರ ಧ್ವನಿ ಬಾಳಿನೆಚ್ಚರಿಕೆಯ ಸಾರುವಿಕೆಯೇ ಆಗಿದೆ. ಉದ್ದಿನ ಮೂಟೆಯಂಥ ದೇಹ ಕಣ್ಣುಮುಚ್ಚಿದರೆ ಅದು ಉರುಳೇ ಹೋಯಿತು. ಕೊನೆಗೆ ಅದಕ್ಕೆ ಕಾಡೇಗೂಡು. ಹಕ್ಕಿ ಜೀವದ ಸಂಕೇತವಾಗಿ, ಸಾವು ಬದುಕಿನ ಆಟವಾಗಿ ಈ ಕಣ್ಣಾಮುಚ್ಚಾಲೆಯ ಆಟ ಅಭಿನೀತಗೊಳ್ಳುತ್ತದೆ. ಮೇಲುನೋಟಕ್ಕೆ ಈ ಪುಟ್ಟ ಪದ್ಯ ಸರಳ ಪದಗಳ ಹಾಡಾಗಿ ಕೇಳಿಸುತ್ತದೆ. ಆದರೆ, ಆ ಸರಳ ಪದಪುಂಜಗಳಲ್ಲಿ ಬಾಳಿನ ರಹಸ್ಯವೇ ಅಡಗಿದೆ. ಇದು ಕಣ್ಣಾಮುಚ್ಚಾಲೆ ಆಟದ ಹಾಡಿನ ರಹಸ್ಯ. ಆಟವೇ ಪಾಠವಾಗಿ ಬೋಧಿತವಾಗುವ ಜೀವನ ರಹಸ್ಯ. ಕನ್ನಡದ ಎಲ್ಲ ಮಕ್ಕಳಿಗೂ ಬಹುತೇಕವಾಗಿ ಗೊತ್ತಿರುವ ಈ ಜನಪ್ರಿಯ ಆಟ, ಆ ಆಟದ ಸಂದರ್ಭದ ಪದ ಇವುಗಳ ಅನುಬಂಧದಲ್ಲಿ ಎಂಥ ನಿಗೂಢತೆ ಇದೆ?!

## ಆನೆಯ ಅಂಬಾರಿ ಅಜ್ಜ

ಅಜ್ಜಿಯ ನಂತರ ಮಕ್ಕಳಿಗೆ ಪ್ರಿಯವಾಗುವ ಇನ್ನೊಬ್ಬ ಬಾಲ್ಯ ಸಂಗಾತಿ ಅಜ್ಜ. ಅಜ್ಜನ ಬೆನ್ನನ್ನು ಆನೆಯ ಅಂಬಾರಿಯಂತೆ ಬಳಸುತ್ತಾ ಆಟವಾಡುವ ಮಕ್ಕಳಿಗೆ ಅಜ್ಜನ ಕೋಲು ಕುದುರೆಯಾಗಿ ಹೆಜ್ಜೆ ಹೆಜ್ಜೆಗೆ ಕುಣಿಯುವ ಕುದುರೆಯಾಗಿ ಬಳಕೆಯಾಗುತ್ತದೆ. ರಚ್ಚೆ ಹಿಡಿದ ಮಗುವನ್ನು ರಮಿಸುವಾಗ ಅಜ್ಜನು ಚತುಷ್ಪಾದಿಯಾಗಿ ತನ್ನ ಬೆನ್ನ ಮೇಲೆ ಮಗುವಿಗೆ ಸವಾರಿ ಮಾಡಿಸುತ್ತಾನೆ. ಆನೆಯ ಅಂಬಾರಿಯಾಗುತ್ತಾನೆ. ಆಗ ಹಾಡುವ ಹಾಡು:

ಆನೆ ಬಂತೊಂದಾನೆ
ಯಾವೂರಾನೆ?
ಸಿದ್ಧಾಪುರದಾನೆ
ಅಲ್ಲಿಗ್ಯಾಕೆ ಬಂತು?
ಹಾದಿತಪ್ಪಿ ಬಂತು
ಇಲ್ಲಿಗ್ಯಾಕೆ ಬಂತು?
ಬೀದಿ ತಪ್ಪಿ ಬಂತು
ಆನೆ ಯಾಕೆ ಬಂತು?
ಏಳ್ನೀರ್ ಕುಡ್ಲಾಕ್ ಬಂತು

ಇದನ್ನು ಹೇಳುವವನು ಅಜ್ಜನೂ ಆಗಬಹುದು ಅಥವಾ ಅಜ್ಜನ ಬೆನ್ನ ಸವಾರಿಗೆ ಕೂತಿರುವ ಮಗುವನ್ನು ಹಿಡಿದುಕೊಂಡ ಅಜ್ಜಿಯೂ ಆಗಬಹುದು. ಈ ಹಾಡಿನ ಪ್ರಶ್ನೋತ್ತರ ಮಗುವಿನ ಮನಸ್ಸಿನ ಬೆಳವಣಿಗೆಗೆ ಪೂರಕವಾಗಿ ಪ್ರಪಂಚದ ಪರಿಚಯ ಹೇಳುವ ಪದವೇ ಆಗಿದೆ.

ವಾರಿಗೆಯ ಗೆಳೆಯರ ಸಾಂಗತ್ಯ

ಮಕ್ಕಳು ತಾವು ಬೆಳೆದಂತೆ ಹಿರಿಯರ ಅವಲಂಬನೆಯಿಂದ ಬಿಡಿಸಿಕೊಂಡು ಸಮಾನವಾರಿಗೆಯ ಅಥವಾ ಮೂರ್ನಾಲ್ಕು ವರ್ಷ ಹಿರಿಯರಾದ ಬಾಲ ಬಾಲೆಯರೊಟ್ಟಿಗೆ ಕಲೆತು ಆಡುವುದು ಸಹಜ ಪ್ರಕ್ರಿಯೆ. ಹಾಗೆ ಆಟ ಆಡುವಾಗ ಅವರ ಆಟಪಾಟದ ಅಂಗಣ ಜಗಲಿಯೂ ಆಗಬಹುದು, ನಡುಮನೆಯೂ ಆಗಬಹುದು, ಬೀದಿ ಬಯಲೂ ಆಗಬಹುದು. ಅವರ ಆಟಕ್ಕೆ ಭಂಗ ಬಾರದ ಯಾವ ಜಾಗವಾದರೂ ಸರಿ, ಮಕ್ಕಳು ಒಟ್ಟಿಗೆ ಕಲೆತು 'ಮೂಡೆ ಆಟ' ಆಡುತ್ತಾರೆ. ಇದನ್ನು 'ಚಕ್ಕಲು ಬಕ್ಕಲು ಆಟ' ಎಂದೂ ಕರೆಯುತ್ತಾರೆ. ನಾಲ್ಕೈದು ಮಕ್ಕಳು ಒಟ್ಟಿಗೆ ಕಲೆತು, ಎಲ್ಲರೂ (ಗುಂಡಾಕಾರದಲ್ಲಿ) ವರ್ತುಲಾಕಾರದಲ್ಲಿ ಕುಳಿತು ಪ್ರತಿಯೊಬ್ಬರೂ ತಮ್ಮ ತಮ್ಮ ಕೈಗಳನ್ನು ಮುಷ್ಟಿ ಹಿಡಿದು, ಒಂದು ಮುಷ್ಟಿಯ ಮೇಲೆ ಮತ್ತೊಂದು ಇಟ್ಟಂತೆ ಎಲ್ಲರೂ ಒಟ್ಟಿಗೆ ಮುಷ್ಟಿಗಳನ್ನು ಪೇರಿಸಿಕೂರುತ್ತಾರೆ. ಅದಾದ ಮೇಲೆ ಒಬ್ಬ ತನ್ನ ಒಂದು ಮುಷ್ಟಿಯನ್ನು ಹೊರತೆಗೆದು ಒಂದೊಂದೇ ಮುಷ್ಟಿಯನ್ನು ತೋರಿಸುತ್ತಾ ಹೀಗೆ ಕೇಳುತ್ತಾ ಹೋಗುತ್ತಾನೆ. ಅದಕ್ಕೆ ಇನ್ನೊಬ್ಬಳು ಅಥವಾ ಎಲ್ಲರೂ ಕೋರಸ್‌ನಲ್ಲಿ ಉತ್ತರಿಸುತ್ತಾ ಹೋಗುತ್ತಾರೆ. ಹೀಗೆ ಪ್ರಶ್ನೋತ್ತರದಲ್ಲಿ ಬೆಳೆವ ಆಟ ಕೊನೆಯಲ್ಲಿ ಎಲ್ಲರೂ ವರ್ತುಲದಲ್ಲಿ ಕುಳಿತಿರುವಂತೆಯೇ ಅಕ್ಕಪಕ್ಕದಲ್ಲಿದ್ದವರ ಕಿವಿಗಳನ್ನು ಅವರ ಕಿವಿ ಇವರು, ಇವರ ಕಿವಿ ಅವರು ಹಿಡಿದುಕೊಂಡು 'ನೊಣ ತಿನ್ನೊ ಗೊಲ್ಲಜ್ಜಿ' ಎಂದು ಕುಳಿತಲ್ಲಿಯೇ ಜೋಲಿ ತೂಗುತ್ತಾರೆ. ಈ ಆಟದ ಹಾಡು ಹೀಗಿದೆ.

ಇದ್ಯಾತ್ರ ಮೂಡೆ?
ಉದ್ದಿನ ಮೂಡೆ
ಇದ್ಯಾತ್ರ ಮೂಡೆ?
ಉಳ್ಳೀ ಮೂಡೆ